**ದಿ: 27-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಎಮ್.ಎಮ್. ವಕೀಲರಿಂದ:**

1. ಸ ನಂ 19/1/ಅ ಮತ್ತು ಸ ನಂ 19/2 ರಲ್ಲಿ 2 ಪಟ್ಟಿಗಳು ಒಂದೆ ಕಡೆ ಇವೆಯಾ ಎಂದರೆ ಸಾಕ್ಷಿಯು ಇಲ್ಲ ಸ್ವಲ್ಪ ದೂರದಲ್ಲಿವೆ ಎನ್ನುತ್ತಾರೆ. ಈ ಎರಡು ಪಟ್ಟಿಗಳ ನಡುವೆ ಎಷ್ಟು ಹೊಲಗಳು ಇವೆ ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಈ ಎರಡು ಪಟ್ಟಿಗಳ ನಡುವೆ ಇರುವ ಪಟ್ಟಿಗಳ ಸರ್ವೆ ನಂಬರ್ ಬೇರೆ ಬೇರೆ ಆಗಿರುತ್ತವೆ. ನಡುವೆ ಇರುವ ಜಮೀನುಗಳ ಸರ್ವೆ ನಂಬರ್ ನನಗೆ ಹೇಳಲು ಆಗುವುದಿಲ್ಲ. ಸ ನಂ 19 ರಲ್ಲಿ ಒಂದು ಕಡೆ 02 ಎಕರೆ 25 ಗುಂಟೆ ಮತ್ತೊಂದು ಕಡೆ 29 ಗುಂಟೆ ಜಮೀನುಗಳು ಇರುತ್ತವೆ ಇವುಗಳನ್ನು ಬಿಟ್ಟು ಸದರಿ ಸರ್ವೆ ನಂಬರ್‌ಗಳಲ್ಲಿ ನಮ್ಮ ಕುಟುಂಬಕ್ಕೆ ಬೇರೆ ಜಮೀನುಗಳು ಇರುವುದಿಲ್ಲ. ಈ ಎರಡು ಹೊಲಗಳು 1972 ರಿಂದ ಅಳ್ಳೆಮ್ಮ ಗಂಡ ಗೋವಿಂದಾಚಾರ್ ಇವರ ಹೆಸರಿನಲ್ಲಿದ್ದವು. ಖಾಸ್ರಾ ಪಹಣಿಯಲ್ಲಿ ಸಹ ಇವರ ಹೆಸರಿನಲ್ಲಿಯೇ ಜಮೀನು ಇರುತ್ತದೆ. ಸದರಿ 1954-55 ನೇ ಇಸ್ವಿಯ ಖಾಸ್ರಾ ಪಹಣಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಾಕ್ಷಿಗೆ ಸ ನಂ 19/2/2, ವಿಸ್ತೀರ್ಣ 0-29 ಗುಂಟೆ ಇದರ 2022-2023 ನೇ ಸಾಲಿನ ಪಹಣಿ ಯನ್ನು ತೋರಿಸಿ ಯಾರ ಹೆಸರಿನಲ್ಲಿ ಇದೆ ಎಂದು ಸೂಚಿಸಲಾಗಿ ಸಾಕ್ಷಿಯು ಅಳ್ಳೆಮ್ಮ ಗಂಡ ಗೋವಿಂದಾಚಾರ್ ಇವರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಸದರಿ ಪಹಣಿಯನ್ನು ಸಾಕ್ಷಿದಾರರು ಗುರುತಿಸಿದ್ದರಿಂದ ನಿ ಡಿ 1 ಎಂದು ಗುರುತಿಸಲಾಯಿತು. ಇವರು ನನ್ನ ತಂದೆಯ ಅಜ್ಜಿಯಾಗಿರುತ್ತಾರೆ. ಸಾಕ್ಷಿಗೆ ಸ ನಂ 19/2/2, ವಿಸ್ತೀರ್ಣ 0-29 ಗುಂಟೆ ಇದರ 2024-2025 ನೇ ಸಾಲಿನ ಪಹಣಿ ಯನ್ನು ತೋರಿಸಿ ಯಾರ ಹೆಸರಿನಲ್ಲಿ ಇದೆ ಎಂದು ಸೂಚಿಸಲಾಗಿ ಸಾಕ್ಷಿಯು 1ನೇ ಪ್ರತಿವಾದಿ ಇವರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಸಾಕ್ಷಿ ಪಹಣಿಯನ್ನು ನೋಡಿ ಗುರುತಿಸಿದ್ದು

ಅದನ್ನು ನಿ ಡಿ -2 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಯ ಹೆಸರಿಗೆ ಇರುವ ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಸದರಿ ಜಮೀನನ್ನು ನೀವು ಈ ದಾವೆಯಲ್ಲಿ ಸೇರಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. 2019 ನೇ ಸಾಲಿನಲ್ಲಿ ಪ್ರತಿವಾದಿ ನಂಬರ್ 2 ಮತ್ತು 3 ದಾವಾ ಹೊಲಗಳನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಇವರ ಹೆಸರಿಗೆ ಪಹಣಿ ಆಗಿರುವುದರಿಂದ ನಾನು ಉಪವಿಭಾಗಾಧಿಕಾರಿಗಳು ರಾಯಚೂರು ಇವರಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಇರುವುದರಿಂದ ಮೇಲ್ಮನವಿ ಸಲ್ಲಿಸಿರುವುದಿಲ್ಲ . ಇವರ ಹೆಸರಿನಲ್ಲಿ ಪಹಣಿ ಆಗಿರುವ ವಿಚಾರ 2022 ರಲ್ಲಿ ಪಹಣಿಯನ್ನು ನೋಡಿದಾಗ ನನಗೆ ಗೊತ್ತಾಗಿರುತ್ತದೆ. ಕೊನೆಯದಾಗಿ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳು 2018 ರಲ್ಲಿ ನಾನು ಪಹಣಿಯನ್ನು ನೋಡಿದ್ದೇನೆ. 2021 ನೇ ಸಾಲಿನಲ್ಲಿ ದಾವಾ ಆಸ್ತಿಗಳನ್ನು ಸರ್ವೆ ಮಾಡಿಸಿ ಯಾರು ಯಾರು ಕಬ್ಜಾದಲ್ಲಿದ್ದಾರೆ ಎಂದು ಪರಿಶೀಲಿಸಿ ಫಾರಂ ನಂಬರ್ 10 ಮಾಡಿಸಿದ ವಿಚಾರ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎನ್ನುತ್ತಾರೆ. ಈ ವಿಚಾರ ನಿಮಗೆ ಗೊತ್ತಿದೆ ಆದರೂ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಬಹಳ ವರ್ಷಗಳ ಹಿಂದ ಪ್ರತಿವಾದಿ 2 ಮತ್ತು 3 ರವರು ದಾವಾ ಜಮೀನುಗಳು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿನಲ್ಲಿದ್ದದ್ದನ್ನು ಅವರು ನೋಡಿಕೊಂಡಿದ್ದಾರೆ ಎನ್ನುತ್ತಾರೆ. ನಾನು ಮತ್ತು ನನ್ನ ಸಹೋದರರಾ ವಾದಿ ನಂ 2 ಮತ್ತು 1ನೇ ಪ್ರತಿವಾದಿ ಯಾವ ಕಾಲಕ್ಕೂ ದಾವಾ ಜಮೀನುಗಳು ಸಾಗುವಳಿ ಮಾಡಿಲ್ಲ. ಎಷ್ಟು ವರ್ಷದಿಂದ ಪ್ರತಿವಾದಿ ನಂಬರ್ 2 ಮತ್ತು 3 ದಾವಾ ಹೊಲಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ತಾಯಿ ಕುಸುಮಾಬಾಯಿಯವರಿಗೆ ಗೊತ್ತು ನನಗೆ

ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಾಯಿ ಕುಸುಮಾಬಾಯಿಯವರು ದಿನಾಂಕ: 25-09-2018 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಹೊಲಗಳನ್ನು ಮೊದಲು ನನ್ನ ಆಯಿ ನೋಡಿಕೊಳ್ಳುತ್ತಿದ್ದರು ನಂತರ ನನ್ನ ತಂದೆ ತಾಯಿ ರವರು ನೋಡಿಕೊಳ್ಳುತ್ತಿದ್ದರು. ನನ್ನ ತಾಯಿ ತೀರಿಕೊಂಡ ಮೇಲೆ ಮತ್ತು ಕೋವಿಡ್ ಲಾಕ್ ಡೌನ್ ಆಗುವುದಕ್ಕಿಂತರ ಮೊದಲು ನಾನು ಪ್ರತಿವಾದಿ ನಂಬರ್ 2 ಮತ್ತು 3 ರವರಿಗೆ ಹೊಲ ಬಿಟ್ಟುಕೊಡಲು ಕೇಳಿಕೊಂಡಿರುವುದಿಲ್ಲ.

3. ದಾವಾ ಹೊಲಗಳು ಮೂಲತ: ವಾಸಪ್ಪಯ್ಯ ತಂದೆ ವೆಂಕಟಪ್ಪಯ್ಯ ಪ್ರತಿವಾದಿ 3 ರವರ ತಂದೆಯ ಅಜ್ಜ ನವರಿಗೆ ಸೇರಿರುತ್ತವೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ವಾಸಪ್ಪಯ್ಯ ತಂದೆ ವೆಂಕಟಪ್ಪಯ್ಯ ಜೀವಂತವಿದ್ದಾಗ ಅವರೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ತರುವಾಯ ಅವರ ಮಗ ಭೀಮಪ್ಪಯ್ಯ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಂತರ ಬೀಮಪ್ಪಯ್ಯ ರವರ ಮಗ ವೆಂಕಟಪ್ಪಯ್ಯ ದೇವರು ಇವರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ತರುವಾಯ ಅವರ ಹ ಹೆಂಡತಿ ಮತ್ತು ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಹೊಲಗಳು ಅಳ್ಳಮ್ಮ ರವರಿಗೆ ಸೇರಿರುತ್ತವೆ ಎಂದು ಸುಳ್ಳು ಹೆಳುತ್ತಿದ್ದಿರಿ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ದಾವಾ ಆಸ್ತಿಯ ಹೊಲಗಳನ್ನು ಕಬಳಿಸಬೇಕೆಂದ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ